ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂ. ಯವರ ನ್ಯಾಯಾಲಯ, ಕುಂದಾಪುರ

ಸಿ.ಸಿ. ನಂಬ್ರ:2697/2015

ಚಾಸಾ:3 ಪ್ರಾಸಾ:2

ದಿನಾಂಕ: 09.06.2025

| | | |
|---|---|---|
| ವಾಗ್ಮೂಲದವರ ಹೆಸರು | : | ಶ್ರೀಮತಿ ಜಾನಕಿ |
| ಗಂಡನ ಹೆಸರು | : | ಕರುಣಾಕರ ಪೂಜಾರಿ |
| ವಯಸ್ಸು | : | 54 ವರ್ಷ |
| ಉದ್ಯೋಗ | : | ಗೃಹಿಣಿ |
| ವಾಸ ಸ್ಥಳ | : | ಕೊಟೇಶ್ವರ |

ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

**<u>ಮುಖ್ಯ ವಿಚಾರಣೆ: ಮಾನ್ಯ ಸ.ಸ.ಅ.ರವರಿಂದ:</u>**

ಆರೋಪಿತರ ಪರಿಚಯವಿದ್ದು ಅವರು ನಮ್ಮ ಗ್ರಾಮಸ್ಥರು. ಚಾಸಾ-1, 2, 4 ರಿಂದ 17 ನಮ್ಮ ಗ್ರಾಮಸ್ಥರು. ಚಾಸಾ-18 ಮತ್ತು 19ರವರ ಪರಿಚಯವಿದೆ.

ನನಗೆ ಯಾವುದೇ ಪ್ರಕರಣದ ಬಗ್ಗೆ ನನಗೆ ಮಾಹಿತಿ ಇಲ್ಲ. ನಾನು ಪೊಲೀಸರಿಗೆ ಯಾವುದೇ ಹೇಳಿಕೆ ನೀಡಿಲ್ಲ. ಸಾಕ್ಷಿ ಮುಮಾ1 ರಿಂದ 4ನ್ನು ನೋಡಿ ಗುರುತಿಸಿಲ್ಲ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಗೆ ವಿರುದ್ಧವಾಗಿ ಸಾಕ್ಷಿ ನುಡಿದಿದ್ದರಿಂದ ಮಾನ್ಯ ಸ.ಸ.ಅ.ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ವಾಟೀ ಸವಾಲಿಗೆ ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)**

**<u>ವಾಟೀ ಸವಾಲು: ಮಾನ್ಯ ಸ.ಸ.ಅ.ರವರಿಂದ:</u>**

ದಿ: 25-01-2015 ರಂದು 2 ಗಂಟೆ ಸಮಯದಲ್ಲಿ 1 ಮತ್ತು 2ನೇ ಆರೋಪಿತರು ಇತರರೊಂದಿಗೆ ಹಿಂದೂ ಮಹಿಳೆಯರ ಬಗ್ಗೆ ಮತ್ತೊಬ್ಬರೊಂದಿಗೆ ಕೈಯಲ್ಲಿ ಇದ್ದ ಮೊಬೈಲನ್ನು ಹಿಡಿದುಕೊಂಡು ವೀಡಿಯೋ ಚಿತ್ರೀಕರಣ ಮಾಡಿರುವ ಅನುಮಾನದಲ್ಲಿ ಚಾಸಾ-2ರವರು ದೃಡಪಡಿಸಲು ಗಾಡಿಯನ್ನು ನಿಲ್ಲಿಸಲು ಸೂಚಿಸಿದಾಗ ಆರೋಪಿತರಲ್ಲೆರೂ ಸೇರಿ ಚಾಸಾ-2 ರಿಂದ 17ರವರ ಮೇಲೆ ಸಮಾನ ಉದ್ದೇಶದಿಂದ ಮಧ್ಯಾಹ್ನ 2 ಗಂಟೆಗೆ ಅಕ್ರಮವಾಗಿ ಕೂಟ ಕಟ್ಟಿಕೊಂಡು ಗಾಜಿನ ಬಾಟಲಿ ಮತ್ತು ಕಲ್ಲುಗಳನ್ನು ಎಸೆದು ಹಲ್ಲೆ ಮಾಡುತ್ತಿದ್ದಾಗ ಸದ್ರಿ ವಸ್ತುಗಳು ನನ್ನ ಬಲಕೈ, ಪಕ್ಕೆಲುಬುಕ್ಕೆ ಬಿದ್ದು ಒಳನೋವು ಆಗಿದ್ದು, ನನಗೆ ಎಡಸೊಂಟದ ಭಾಗದಲ್ಲಿ ಸಾಮಾನ್ಯ ಸ್ವರೂಪಾದ ಊತದ ನೋವು ಆಗಿತ್ತು ಎಂದರೆ ಸರಿಯಲ್ಲ. ಉಳಿದ ಸಾಕ್ಷಿದಾರರಿಗೆ ಅಲ್ಲಲ್ಲಿ ಸಣ್ಣಪಟ್ಟು ಗಾಯಗಳಾಗಿ ಸಾಮಾನ್ಯ ಸ್ವರೂಪದ ನೋವು ಉಂಟಾಗಿತ್ತು ಎಂದರೆ

ಸರಿಯಲ್ಲ. ಇದೇ ವಿಚಾರವಾಗಿ ಚಾಸಾ-1 ರವರು ನಿಪಿ-1 ರಂತೆ ಪೊಲೀಸರಿಗೆ ದೂರು ನೀಡಿರುತ್ತಾರೆ ಎಂದರೆ ಸರಿಯಲ್ಲ.

ಇದೇ ವಿಚಾರವಾಗಿ ಪೊಲೀಸರು ನನ್ನನ್ನು ದಿಃ 08-02-2015 ರಂದು ವಿಚಾರಿಸಿ ಹೇಳಿಕೆ ಪಡೆದಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಗೆ ಸದ್ರಿ ಹೇಳಿಕೆಯನ್ನು ಓದಿ ತಿಳಿಸಿದ್ದು ಆಕೆ ಅದನ್ನು ಒಪ್ಪಿರುವುದಿಲ್ಲ. ಸದ್ರಿ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು. ನಾವು ಮತ್ತು ಆರೋಪಿತರು ಒಂದೇ ಗ್ರಾಮಸ್ಥರಾಗಿದ್ದು ಒಬ್ಬರ ಮೇಲೆ ಒಬ್ಬರು ಗಲಭೆ ಎಬ್ಬಿಸಿ ನನ್ನ ಸಂಬಂಧಿಕರ ವಿರುದ್ದ ನ್ಯಾಯಾಲಯದ ಮುಂದೆ ಇರುವ ಆರೋಪಿತರು ದಾಖಲಿಸಿದ ಪ್ರಕರಣಗಳು ಒಳಗೊಂಡಂತೆ 2 ಪ್ರಕರಣಗಳಲ್ಲೂ ರಾಜಿ ಮಾಡಿಕೊಂಡಿರುವ ಕಾರಣ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ

**ವಾಟೀ ಸವಾಲುಃ ಆರೋಪಿತರ ಪರ ವಕೀಲರು ವಾಟೀ ಸವಾಲು ಇಲ್ಲ ಎಂದು ನುಡಿದಿರುತ್ತಾರೆ.**

**ಮರು ವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

**ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು**
**ಪ್ರ. ದ. ನ್ಯಾ. ದಂ. ಕುಂದಾಪುರ**